

ಕರೆದುಕೊಂಡು ಹೋದರು. ಅವರ ಶಿಬಿರದಲ್ಲಿ ಈಗಾಗಲೇ ಇದ್ದ ಒಬ್ಬಳು ಹೆಣ್ಣನ್ನು ಬೆತ್ತಲೆ ಮಾಡಿ ಅವಳ ಮೇಲೆ ನಾಯಿಗಳನ್ನು ಬಿಟ್ಟು ಆಕೆಯ ಸ್ತನಗಳನ್ನು ಹರಿದುಹಾಕಲಾಯಿತು. ಎಲ್ಲೆಲ್ಲೂ ರಕ್ತ ಹರಿಯಿತು. ನಂತರ ಇವಳ ಸರತಿ. ಐವರು ಈಕೆಯನ್ನು ಹಿಡಿದು, ಒಬ್ಬರ ನಂತರ ಒಬ್ಬರಂತೆ ಹಿಂದೆಯೂ ಮುಂದೆಯೂ ಅತ್ಯಾಚಾರ ಮಾಡಿದರು. ನಾಯಿಗಳಿಗೆ ಕೊಡಲು ಆಕೆಗಿನ್ನೂ ಸ್ತನಗಳು ಬೆಳೆದಿರಲಿಲ್ಲ. ನಂತರ ಬಲಿಯಾದವಳ ಅಕ್ಕ ಬಂದು ಆಕೆಯನ್ನು ಮೌನವಾಗಿ ಮನೆಗೆ ಕರೆದುಕೊಂಡು ಹೋದಳು. ಇದರ ಬಗೆಗೆ ಯಾರೂ ಚಕಾರ ಶಬ್ದ ಎತ್ತಲಿಲ್ಲ."

'ಯಾವುದೇ ಯುದ್ಧ ನಡೆದರೂ ಯುದ್ಧಕ್ಷೇತ್ರ ಆಗುವುದು ಹೆಣ್ಣಿನ ಶರೀರ' ಎಂದು ಯಾರೋ ಹೇಳಿರುವುದು ಅಕ್ಷರಶಃ ಭೀಕರ ಸತ್ಯ!

## ನಮ್ಮೊಳಗಿನ ಅತ್ಯಾಚಾರಿ

ನಿರ್ಭಯಾಳ ಪ್ರಕರಣದ ಸುತ್ತ ಚರ್ಚೆ ನಡೆಯುತ್ತಿರುವಾಗ ಕಡಿಮೆ ಬಟ್ಟೆ ಧರಿಸಿದ ಹೆಣ್ಣು ಗಂಡನ್ನು ಅತ್ಯಾಚಾರಕ್ಕೆ ಪ್ರಚೋದಿಸುತ್ತಾಳೆ ಎಂದು ಕೆಲವರೆಂದರು. ಇದನ್ನು ಕೆಲವು ಅಪರಾಧಿಗಳೂ ಒಪ್ಪಿದ್ದಾರೆ. ಇದನ್ನು ಸ್ವಲ್ಪ ಭಿನ್ನವಾಗಿ ಯೋಚಿಸೋಣ: ಮೈಕಾಣುವಂತೆ ಉಡುಪು ಧರಿಸಿದ ಹೆಣ್ಣನ್ನು ಕಂಡ ಗಂಡಸರಿಗೆ ಏನೇನು ಆಯ್ಕೆಗಳಿವೆ? ಒಂದು: ಅವಳನ್ನು ಗಮನಿಸದೆ ತನ್ನಷ್ಟಕ್ಕೆ ತಾನಿರುವುದು. ಎರಡು: ಅವಳ ಹಕ್ಕನ್ನು ಗೌರವಿಸುವುದು. ಮೂರು: ಆಕೆಯ ಸೌಂದರ್ಯಪ್ರಜ್ಞೆಯನ್ನು ಮೆಚ್ಚುವುದು. ನಾಲ್ಕು: ಮನದಲ್ಲೇ ಕಾಮಭಾವ ಅನುಭವಿಸಿ ಖುಷಿಪಡುವುದು. ಈ ನಾಲ್ಕು ಆಯ್ಕೆಗಳನ್ನು ಬಿಟ್ಟು ಅತ್ಯಾಚಾರಕ್ಕೆ ಮನಸ್ಸು ಮಾಡುವುದರ ಹಿಂದೆ ಯಾವ ಮನೋಭಾವವಿದೆ?

'ನನ್ನ ಕಾಮತೃಪ್ತಿಗಾಗಿ ಹದ್ದಿನ ಕಣ್ಣಿನಿಂದ ಎಲ್ಲ ಹೆಣ್ಣುಗಳನ್ನು ಗಮನಿಸುತ್ತ ಇರುತ್ತೇನೆ, ನನ್ನ ವರ್ತನೆಯು ಹದ್ದುಮೀರಿದರೆ ಅದಕ್ಕೆ ನೀನೇ ಹೊಣೆಗಾರಳು!' ಎನ್ನುವುದು ಪುರುಷ ಪಾರಮ್ಯವಲ್ಲದೆ ಮತ್ತೇನಿಲ್ಲ. ಹೆಣ್ಣು ಅಲಂಕರಿಸಿಕೊಳ್ಳುವುದೇ ಗಂಡನ್ನು ಆಕರ್ಷಿಸಲು ಎಂದವರು ಭಾವಿಸುತ್ತಾರೆ. ಯಾರಿಗೇ ಆಗಲಿ, ತಮ್ಮ ಶರೀರವನ್ನು ಹೆಮ್ಮೆಯಿಂದ ಅಲಂಕರಿಸಿಕೊಳ್ಳಲು, ಪ್ರದರ್ಶಿಸಲು ಹಕ್ಕಿದೆ. ಅಶ್ಲೀಲ ಎನ್ನುವುದು ನೋಡುವವರ ಕಣ್ಣಲ್ಲಿದೆ – ಅದೇ ಮಹಿಳೆಯರ ಗುಂಪಿನಲ್ಲಿ ಕಡಿಮೆ ಬಟ್ಟೆ ಧರಿಸಿದವರನ್ನು ಮೆಚ್ಚುತ್ತಾರೆಯೇ ಹೊರತು ಟೀಕಿಸುವುದಿಲ್ಲ. ಇನ್ನು ಕೆಲವು ಸ್ವಯಂಘೋಷಿತ ಸಂಸ್ಕೃತಿಯ ರಕ್ಷಕರು ಕಡಿಮೆ ಬಟ್ಟೆ ಧರಿಸಿದ ಮಹಿಳೆಯರನ್ನು ಅವಮಾನಿಸಿದ್ದು ಇದೆ (ಬದಲಾಗಿ ಮೈತುಂಬ ಆವರಿಸುವ ಉಡುಪಿನ ಉಡುಗೊರೆ ಕೊಟ್ಟು ನಮಸ್ಕರಿಸಬಹುದಿತ್ತು). ಹೆಣ್ಣನ್ನು ಗೌರವಿಸುವುದರ ಬದಲು ಅವಮಾನಿಸುವುದು ಯಾವ ಸಂಸ್ಕೃತಿ ಎಂದು ಯೋಚಿಸಿದರೆ ಕಟುಸತ್ಯವೊಂದು ಕಾಣುತ್ತದೆ: ನಮ್ಮೆಲ್ಲರಲ್ಲೂ ಒಬ್ಬ ಅತ್ಯಾಚಾರಿ ಇದ್ದಾನೆ!

## ಸಿರಿಬೆಳೆಯ ಪೋಷಣೆ ಮೊಳಕೆಯಲ್ಲಿ

ಡಾ. ಎಡ್ವರ್ಡ್ ಟ್ರೋನಿಕ್ ಮಾಡಿರುವ **Still Face Experiment** ಎಂಬ ವಿಡಿಯೊವನ್ನು ಎಲ್ಲರೂ ನೋಡಲೇಬೇಕು. ಶೈಶವದಲ್ಲಿ ಮಗುವಿಗೆ ತಾಯಿಯು ಕೊಡುವ ನಿರಂತರ ಶರೀರಸ್ಪರ್ಶ, ಗಮನ, ಹಾಗೂ ವಾತ್ಸಲ್ಯಗಳು ಮಗುವಿನ ಭಾವನಾತ್ಮಕ ಬೆಳವಣಿಗೆಯ ಮೇಲೆ ಹೇಗೆ ಪ್ರಭಾವ ಬೀರುತ್ತವೆ ಎನ್ನುವ ಸಮೃದ್ಧ ಮಾಹಿತಿ ಇದರಲ್ಲಿದೆ. ಶೈಶವದಲ್ಲಿ ಮಾತೃವಾತ್ಸಲ್ಯದಿಂದ (ಅಥವಾ ಯಾವುದೇ ಹಿರಿಯ ಹೆಂಗಸಿನ ಸುಖಸಂಪರ್ಕದಿಂದ) ವಂಚಿತರಾದ ಗಂಡುಮಕ್ಕಳಿಗೆ ಬೆಳೆದಮೇಲೆ ಹೆಣ್ಣಿನೊಡನೆ ಭಾವಬಂಧ ಕಟ್ಟಿಕೊಳ್ಳುವ ಮಾದರಿ ಇರುವುದಿಲ್ಲ. ಅದರಲ್ಲಿ ಹಿಂಸೆಕೊಡುವ ತಾಯಿಯಿದ್ದರಂತೂ ಮಕ್ಕಳು ಸ್ತ್ರೀದ್ವೇಷಿಯಾಗಿ ರೂಪುಗೊಳ್ಳುತ್ತಾರೆ. ಅತ್ಯಾಚಾರಿಗಳ ಬಾಲ್ಯವನ್ನು ಬಗೆದಾಗ ಮಾತೃವಾತ್ಸಲ್ಯದ ಗೈರುಹಾಜರಿ ಎದ್ದುಕಂಡಿದೆ. ಇನ್ನೊಂದು ಮುಖ್ಯ ಸಂಗತಿ ಏನೆಂದರೆ, ಅತ್ಯಾಚಾರ ನಡೆಸುವವರು ಬಾಲ್ಯದಲ್ಲಿ ಸ್ವತಃ ಅತ್ಯಾಚಾರಕ್ಕೆ ಅಥವಾ ಲೈಂಗಿಕ ದುರ್ನಡತೆಗೆ ತುತ್ತಾಗಿರುತ್ತಾರೆ.

## ತಾಯಂದಿರ ಗಮನಕ್ಕೆ

- ಮಕ್ಕಳನ್ನು ಹೆಣ್ಣು–ಗಂಡೆಂದು ಭೇದಭಾವ ಮಾಡದೆ ಸಮಾನತೆಯಿಂದ ಕಾಣಬೇಕು.
- ಗಂಡುಮಕ್ಕಳಿಂದ ಸಾಂಪ್ರದಾಯಿಕ ಮೌಲ್ಯಗಳಾದ ಧೈರ್ಯ, ಸಾಹಸ, ಮುನ್ನುಗ್ಗುವ ಭಂಡತನ ಮುಂತಾದವುಗಳನ್ನು ಅಪೇಕ್ಷಿಸಬಾರದು.
- ಗಂಡುಮಕ್ಕಳು ಅಳುವ, ಭಯಪಡುವ, ಧೈರ್ಯಗುಂದುವ ಸಹಜ ವರ್ತನೆಯನ್ನು ಗೌರವಿಸಬೇಕು.
- ಗಂಡಿನ ಪುರುಷತ್ವಕ್ಕೆ ಮಹತ್ವ ಕೊಡದೆ ಅವನು ಹೆಣ್ಣುಗಳೊಂದಿಗೆ ಕಟ್ಟಿಕೊಳ್ಳುವ ಸಮಾನಸ್ನೇಹಕ್ಕೆ ಒತ್ತು ಕೊಡಬೇಕು.
- ಹೊರಹೆಂಗಸರು ಹೇಗೇ ಇರಲಿ, ಅವರ ಹೆಣ್ಣುತನವನ್ನು ಗೌರವಿಸಲು ಕಲಿಸಬೇಕು.
- ಹೆಣ್ಣಿನ ಮೇಲೆ ಗಂಡು ಒತ್ತಾಯಿಸುತ್ತಿದ್ದರೆ ಸಹಾಯಕ್ಕೆ ಧಾವಿಸಲು ಹೇಳಿಕೊಡಬೇಕು.

ಅತ್ಯಾಚಾರ ಪ್ರಸಂಗಗಳಲ್ಲಿ ಉಮೇಶ ರೆಡ್ಡಿಯಂಥ ಅಪರಾಧಿಗಳ ವಿರುದ್ಧ ರೋಷ ಉಕ್ಕುತ್ತದೆ. ಅದೇನೋ ಸರಿ, ಆದರೆ ಇಂಥ ಅತ್ಯಾಚಾರಿಗಳು ನಮ್ಮಲ್ಲೇ – ಸೌಮ್ಯರೂಪದಲ್ಲಾದರೂ ಸರಿ – ಇದ್ದಾರೆಂದು ಗೊತ್ತಾದಾಗ, ಹಾಗೂ ಆತ ನಮ್ಮ ಬಂಧು ಎಂದಾಗ ಏನು ಮಾಡುತ್ತೇವೆ? ಅವರನ್ನು ಕಾನೂನಿನ ಕೈಗೆ ಒಪ್ಪಿಸುವುದು ಒತ್ತಟ್ಟಿಗಿರಲಿ, ಎದುರುಹಾಕಿಕೊಳ್ಳುವ ಧೈರ್ಯ ನಮಗಿದೆಯೆ? 'ನೀತಿಶಾಸ್ತ್ರ' ಎಂಬ ಹಿಂದಿ ಕಿರುಚಿತ್ರದಲ್ಲಿ ತಾಪ್ಸೀ ಪನ್ನು ಅತ್ಯಾಚಾರ ಮಾಡಿದ ತಮ್ಮನನ್ನೇ ದ್ವಂದ್ವದಲ್ಲಿ ಕೊಲ್ಲುತ್ತಾಳೆ. ಹಾಗೆ ಎಷ್ಟು ಜನರು ತಮ್ಮ ಮೌಲ್ಯಗಳನ್ನು ಕಾಪಾಡುತ್ತಾರೆ? ಈ ಪ್ರಶ್ನೆ ಯಾಕೆ ಬಂತು ಎನ್ನುವುದಕ್ಕೆ ಕಾರಣವಿದೆ: ನಾನು ನೋಡಿರುವ ನೂರಾರು ಅತ್ಯಾಚಾರದ